ಪರಿವರ್ತನೆ ಮಾಡಿಕೊಂಡಿರುವುದು ನಿಜ. ಇದರ ಬಗ್ಗೆ ಕಾಲ ವಿಳಂಬ ಮಾಡದೆ ಸರ್ಕಾರದವರು ಗಂಭೀರವಾಗಿ ಪರಿಶೀಲನೆ ಮಾಡಿ ಧರಣಿ ಕುಳಿತಿರುವವರನ್ನು ಕರೆಸಿ ಮಾತನಾಡಿ, ಕಾಲೇಜುಗಳನ್ನು ನಡೆಸುವುದಕ್ಕೆ ಅನುಕೂಲ ಮಾಡಬೇಕು, ಹಾಗೂ ಅವರಿಗೆ ಏನು ಸವಲತ್ತುಗಳನ್ನು ಕೊಡಬೇಕೋ ಅದನ್ನು ಕೊಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡುತ್ತೇನೆ.

ಶ್ರೀ ಸಿ.ಗುರುನಾಥ್ : ಇವರ ಬಗ್ಗೆ ಆದಷ್ಟು ಬೇಗ ಪರಿಶೀಲನೆ ಮಾಡುತ್ತೇನೆ.

ವಿಷಯ : ರೇಷ್ಮೆ ಮೇಲೆ ತೆರಿಗೆ ವಿಧಿಸಿರುವುದರಿಂದ ಉಂಟಾಗಿರತಕ್ಕ ಪರಿಸ್ಥಿತಿ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋದ ಪಕ್ಷದನಾಯಕರು) : ಮಾನ್ಯ ಅಧ್ಯಕ್ಷರೆ, ತಾವೂ ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂಥವರು. ನಮ್ಮ ರಾಜ್ಯದಲ್ಲಿ 80 ಪರ್‌ಸೆಂಟ್‌ನಷ್ಟು ರೇಷ್ಮೆಯನ್ನು ಉತ್ಪಾದನೆ ಮಾಡಲಾಗುತ್ತಿದೆ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಅದರ ಮೇಲೆ 2 ಪರ್‌ಸೆಂಟ್ ಟ್ಯಾಕ್ಸ್ ಹಾಕುವುದಕ್ಕೆ ಹೋಗಿದ್ದಾಗ ಈ ಉದ್ದಿಮೆಗೆ ತೊಂದರೆಯಾಗುತ್ತದೆಂದು ವಾಪಸ್ ತೆಗೆದುಕೊಳ್ಳಲಾಗಿತ್ತು. ಇವತ್ತು ಅದರ ಮೇಲೆ 4 ಪರ್‌ಸೆಂಟ್ ಟ್ಯಾಕ್ಸ್ ಹಾಕಿರುವುದರಿಂದ ನಾಳೆಯಿಂದ ರೇಷ್ಮೆ ಉದ್ಯಮ ಪೂರ್ತಿ ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಈ ಉದ್ದಿಮೆ ಉಳಿಸುವ ದೃಷ್ಟಿಯಿಂದ ಟ್ಯಾಕ್ಸ್‌ನ್ನು ಕಡಿಮೆ ಕೊಡಬೇಕು. ಕೇರಳ ಮತ್ತು ಆಂಧ್ರ ಪ್ರದೇಶದಲ್ಲಿ ರೇಷ್ಮೆ ಮೇಲೆ ಟ್ಯಾಕ್ಸ್ ಹಾಕಿಲ್ಲ. 30 ಪರ್ಸೆಂಟ್ ಉತ್ಪಾದನೆ ಮಾಡಿತಕ್ಕಂಥ ನಮ್ಮ ರಾಜ್ಯ ಬೇರೆ ರಾಜ್ಯಗಳಿಗೆ ಮಾರ್ಗದರ್ಶಕವಾಗುವ ಬದಲು ಟ್ಯಾಕ್ಸ್ ಹಾಕಿರುವುದರಿಂದ ರೇಷ್ಮೆ ವ್ಯಾಪಾರವೆಲ್ಲಾ ಪಕ್ಕದ ರಾಜ್ಯಗಳಿಗೆ ಹೋಗಿ ಆ ಉದ್ಯಮವೇ ಬಂದ್ ಆಗುವ ಲಕ್ಷಣಗಳಿವೆ. ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ರೇಷ್ಮೆ ವ್ಯಾಪಾರ ಇಲ್ಲದೆ ಕಬ್ಬನ್ ಪೇಟೆ ಪೂರ್ತಿ ಬಂದ್ ಆಗುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : 4 ಪರ್‌ಸೆಂಟ್ ತೆರಿಗೆ ಹಾಕಿರುವುದನ್ನು ತೆಗೆದು ಹಾಕಿ ರೇಷ್ಮೆ ಉದ್ಯಮಕ್ಕೆ ಆಗುತ್ತಿರುವ ತೊಂದರೆಯನ್ನು ತಡೆಗಟ್ಟಲಾಗುತ್ತದೆಯೇ? ಹಾಗೂ ನಾಳೆಯಿಂದ ರೇಷ್ಮೆ ವ್ಯಾಪಾರಸ್ಥರು ವ್ಯಾಪಾರವನ್ನು ಬಂದ್ ಮಾಡುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ನಾಗರಾಜಯ್ಯ : ಮಾನ್ಯ ಅಧ್ಯಕ್ಷರೆ, ಸರ್ಕಾರವು ತೆರಿಗೆ ಹಾಕಿರುವುದರಿಂದ ಉದ್ದಿಮೆದಾರರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ಈ ತೆರಿಗೆಯು ಪರ್ಚೇಸರ್ ಮೇಲೆ ಬೀಳುತ್ತದೆಯೇ ಹೊರತು ಉದ್ದಿಮೆದಾರರ ಮೇಲೆ ಬೀಳತಕ್ಕಂಥ ತೆರಿಗೆ ಅಲ್ಲ.ಅದಕ್ಕೋಸ್ಕರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡಿ, ಉದ್ದಿಮೆದ್ದಾರರಿಗೆ ಏನಾದರೂ ತೊಂದರೆಯಾಗುವಂಥಾದ್ದಿದ್ದರೆ ಅದನ್ನು ಪರಿಶೀಲಿಸಿ, ಅವರಿಗೆ ತೊಂದರೆಯಾಗದ ರೀತಿಯಲ್ಲಿ ಅವರಿಗೆ ಸೂಕ್ತವಾದಂಥ ಪರಿಹಾರವನ್ನು ಕಂಡುಹಿಡಿಯುವುದರ ಮೂಲಕ ಅವರ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಕಕೂನ್ಸ್‌ಗೆ ಒಂದು ಪರ್‌ಸೆಂಟ್‌ನ್ನು ಹಾಕಿದ್ದೀರಿ. ತಮಗೆ ಗೊತ್ತಿರುವ ಹಾಗೆ ನಾವು ಹತ್ತು ಕೆ.ಜಿ.ಕಕೂನ್ ಮಾಡಿದ್ದರೆ ಒಂದು ಕೆ.ಜಿ.ಬರುತ್ತದೆ. ಆ ಒಂದು ಕೆ.ಜಿ ಕೂಡ ಬ್ಲೀಚ್ ಆದ ಮೇಲೆ ಬರತಕ್ಕಂಥಾದ್ದು 750 ಗ್ರಾಂ ಮಾತ್ರ. ಆ ಮೇಲೆ ವೀವಿಂಗ್ ಟೈಮ್‌ನಲ್ಲಿ ಲಾಸ್ ಆಗುತ್ತದೆ. ಸಿಲ್ಕ್ ಎಕ್ಸ್‌ಚೇಂಜ್‌ನಲ್ಲಿ ಈಗಾಗಲೇ 2 ಪರ್‌ಸೆಂಟ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಅದಾದ ಮೇಲೆ ಈಗ 4 ಪರ್‌ಸೆಂಟ್, ಕಲರ್ಸ್‌ಗೆ 7 ಪರ್‌ಸೆಂಟ್, ಒಟ್ಟು 14 ಪರ್‌ಸೆಂಟ್ ಆಗುತ್ತದೆ. ಇಷ್ಟು ಟ್ಯಾಕ್ಸ್ ಎಲ್ಲಿಯೂ ಕೂಡ ಇಲ್ಲ. ಹೀಗೆ ಟ್ಯಾಕ್ಸ್ ತಮಿಳುನಾಡು, ಆಂಧ್ರಪ್ರದೇಶ ಮತ್ತಿತರ ಕಡೆಗಳಲ್ಲಿ ಎಲ್ಲಿಯೂ ಇಲ್ಲ. ತಾವುಗಳು ಹೇಳುತ್ತೀರಿ, ಇದು ಪರಚೇಸರ್ಸ್ ಮೇಲೆ ಹೋಗುತ್ತದೆ ಎಂದು. ಹಾಗಾದರೆ ಗ್ರಾಹಕರಾಗಿ ನಾವು ತಮಿಳುನಾಡಿನ ಕಂಚಿಗೆ ಕಾಳಹಸ್ತಿಗೆ, ಮತ್ತಿತರ ಕಡೆಗೆ ಹೋಗಬೇಕೇ? ಹೀಗೆ ಮಾಡುವುದರ ಮೂಲಕ ಮಹಿಳೆಯರಿಗೆ ಅನ್ಯಾಯ ಮಾಡಿದ ಹಾಗೆ ಆಗಿದೆ. ಬೆಂಗಳೂರು ಮತ್ತಿತರ ಕಡೆಗಳಲ್ಲಿ ರೇಷ್ಮೆ ವ್ಯವಹಾರವು ಪೂರ್ತಿಯಾಗಿ ಸ್ಥಗಿತವಾಗುತ್ತಾ ಇದೆ. ಇದು ಯೋಚನೆ ಮಾಡತಕ್ಕಂಥ ವಿಚಾರವಾಗಿದೆ. ಇದರ ಮೂಲಕ ವ್ಯಾಪಾರಸ್ಥರು ನೌಕರರು ಮತ್ತು ಗ್ರಾಹಕರುಗಳಿಗೆ ಭಾರಿ ಅನ್ಯಾಯವಾಗಿದೆ. ಹೀಗಿರುವಾಗ ಏತಕ್ಕಾಗಿ ಇದನ್ನು ಹೆಚ್ಚಿಗೆ ಮಾಡಿದ್ದೀರಿ?

ಶ್ರೀ ಡಿ. ನಾಗರಾಜಯ್ಯ : ಮಾನ್ಯ ಅಧ್ಯಕ್ಷರಿಗೆ ಈ ಉದ್ದಿಮೆಯಲ್ಲಿ ತೊಡಗಿರುವವರಿಗೆ ಯಾವುದೇ ವಿಧವಾದ ತೊಂದರೆಯಾಗದಂತೆ ಸರಕಾರವು ನೋಡಿಕೊಳ್ಳುತ್ತದೆ. ಮಾನ್ಯ ಸದಸ್ಯರುಗಳು ಯಾವ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು : ತಾವು ವಿರೋಧ ಪಕ್ಷದ ನಾಯಕರನ್ನು ಮತ್ತು ಇತರ ಸಂಬಂಧಪಟ್ಟವರನ್ನು ಹಾಗೂ ಇಲಾಖೆಯ ಅಧಿಕಾರಿಗಳನ್ನು ತಮ್ಮ ಕಛೇರಿಗೆ ಕರೆಯಿಸಿಕೊಂಡು ವಿಷಯವನ್ನು ಸಮಗ್ರವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬನ್ನಿ.

ಶ್ರೀ ಡಿ.ನಾಗರಾಜಯ್ಯ : ಮಾನ್ಯ ಸದಸ್ಯರುಗಳು ಹೇಳಿದಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತವಾದಂಥ ಒಂದು ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ..

ಶ್ರೀ ವಸಂತ್ ವಿ.ಸಾಲಿಯಾನ್ : ಸನ್ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು : ಇಲ್ಲ ಇಲ್ಲ ... There cannot be a debate now. You are senior Member. You will have to co-operate with me. I have not allowed you.

ನೀವು ಮೊದಲು ಸಕಾಲದಲ್ಲಿ ಬಂದು ಭೇಟಿಯಾಗಿಲ್ಲ. ಈಗ ತಮಗೆ ಅವಕಾಶ ಕೊಡಲು ಆಗುವುದಿಲ್ಲ.

ಶ್ರೀ ವಸಂತ್ ಸಾಲಿಯಾನ : ನಾನು ತಮ್ಮ ಅಪ್ಪಣೆ ಪಡೆದು ಜೀರೋ ಅವರ್‌ನಲ್ಲಿಯೇ ಕೇಳುತ್ತಾ ಇದ್ದೇನೆ. ಒಂದು ಬಹಳ ಮುಖ್ಯವಾದ ವಿಚಾರ ಇದೆ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ .... I am sorry. You will have to meet me early.

ಶ್ರೀ ವಸಂತ್ ವಿ. ಸಾಲಯನ : ಇದು ಬಹಳ ಪ್ರಾಮುಖ್ಯವಾದ ವಿಚಾರ ದಕ್ಷಿಣ ಕನ್ನಡ ಜಿಲ್ಲೆಯ ನೇಕಾರರ ವಿಚಾರವಾದ ಕಾರಣ ನನಗೆ ಅವಕಾಶ ಕೊಡಬೇಕಾಗುತ್ತದೆ.

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಯ ವಿಚಾರವೇ ಆಗಿರಲಿ, ನೀವು ಹೊದಲು ಬಂದು ಭೇಟಿಯಾಗಿ ಹೇಳಬೇಕು. You have not brought it to my notice. Please resume your seat ದಯಮಾಡಿ ತಾವು ಕುಳಿತುಕೊಳ್ಳಿ. ನೀವು ಹೇಳಿದ ಹಾಗೆ ಅವಕಾಶ ಮಾಡಿಕೊಡಲು ಆಗುವುದಿಲ್ಲ. Please don't enter into argument with the Chair. ದಯಮಾಡಿ ಕುಳಿತುಕೊಳ್ಳಿ.

ವಿಷಯ : ಮುಖ್ಯಮಂತ್ರಿಯವರು ದೆಹಲಿಯಲ್ಲಿ ತಮಿಳುನಾಡು ರಾಜ್ಯಪಾಲರ ಬಗ್ಗೆ ನೀಡಿರುವ ಹೇಳಿಕೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಎರಡು ಪ್ರಶ್ನೆಗಳನ್ನು ತಮ್ಮ ಗಮನಕ್ಕೆ ತರಬೇಕಾದಂಥಾದ್ದು ಇದೆ. ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಡೆಲ್ಲಿಯಲ್ಲಿ ಒಂದು ಸಂದರ್ಭದಲ್ಲಿ ಪತ್ರಿಕಾ ಪ್ರತಿನಿಧಿಗಳ ಜೊತೆಯಲ್ಲಿ ಮಾತನಾಡುವಾಗ ತಮಿಳುನಾಡು ರಾಜ್ಯಪಾಲರ ವರ್ತನೆ ಬಗ್ಗೆ ಮಾತನಾಡಿದ್ದಾರೆ. ಚೆನ್ನಾರೆಡ್ಡಿಯವರ ಕ್ರಮ ಒಕ್ಕೂಟದ ವ್ಯವಸ್ಥೆಗೆ ಅತ್ಯಂತ ಅಪಾಯಕಾರಿ ಎನ್ನತಕ್ಕಂಥ ಮಾತನ್ನು ಈ ಸದನದ ಮುಖ್ಯಮಂತ್ರಿಯವರೇ ಹೇಳಿರತಕ್ಕಂಥ ಮಾತು. ಎಲ್ಲಿಯವರೆಗೆ ಹೇಳಿದ್ದಾರೆ ಅಂದರೆ ''ಕ್ರಮ'' ಅನೈತಿಕ ಕ್ರಮ, ರಾಜ್ಯಪಾಲರು ತಮ್ಮ ಅಧಿಕಾರದ ದುರುಪಯೋಗ.....

ಶ್ರೀ ಜೆ.ಹೆಚ್.ಪಟೇಲ್ (ಉಪಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೇ ನನ್ನ ಕ್ರಿಯಾಲೋಪವಿದೆ ಅವೊತ್ತು ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಸದಸ್ಯರಿಗೆ ಏನು ಹೇಳಿದ್ದಾರೆ ಅಂದರೆ, ಇಂಥ ರಾಜ್ಯಪಾಲರು, ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಹೊರಗೆ ತಾವು ಏನೇ ಹೇಳಿಕೆ ಕೊಡಬಹುದು, ಸದನದಲ್ಲಿ ಇನ್ನೊಂದು ರಾಜ್ಯದ ಮುಖ್ಯಮಂತ್ರಿ ಇನ್ನೊಂದು ರಾಜ್ಯದ ರಾಜ್ಯಪಾಲರುಗಳ ಬಗ್ಗೆ ಪ್ರಸ್ತಾಪ ಮಾಡಲೇ ಕೂಡದು ನಿಯಮ 326 ರ ಕೆಳಗಡೆ ಅವರ ಹೆಸರನ್ನು ನಾವು ಮೆನ್‌ಷನ್ ಮಾಡುವ ಹಾಗೆ ಇಲ್ಲ ಅದಕ್ಕಾಗಿ ನಮ್ಮ ಮುಖ್ಯಮಂತ್ರಿಯವರು ಅಲ್ಲಿ ಏನು ಹೇಳಿದ್ದಾರೆ ಅದನ್ನು ಇವರು ಹೊರಗಡೆ ಹೇಳಲಿ... ಸದನದಲ್ಲಿ ಬೇಡ.

ಶ್ರೀ ವಾಟಾಳ್ ನಾಗರಾಜ್ ನಮ್ಮ ಮುಖ್ಯ ಮಂತ್ರಿಯವರು ಡೆಲ್ಲಿಯಲ್ಲಿ ಆ ಒಂದು ಹೇಳಿಕೆ ಕೊಟ್ಟಿರುವಾಗ ನಾವು ಇಲ್ಲಿ ಅದಕ್ಕೆ ಬೆಂಬಲವನ್ನು ಸೂಚಿಸಿ,